
ಹೇಳಲು ಸಾಧ್ಯ? ಅದರಲ್ಲೂ ಈಚೆಗೆ ಪ್ರಕಟಗೊಂಡ ಅಶೋಕ್ ಗೋಪಾಲ್ ಅವರ 'ಎ ಪಾರ್ಟ್ ಅಪಾರ್ಟ್' ಅನ್ನುವ ಅತ್ಯಂತ ಪಾಂಡಿತ್ಯಪೂರ್ಣ ಹಾಗೂ ಪರಿಪೂರ್ಣವೆನ್ನಿಸುವ ಪುಸ್ತಕದ ನಂತರ ಬರೆವ ಲೇಖಕರ ಮುಂದೆ ಸಹಜವಾಗಿಯೇ ದೊಡ್ಡ ಸವಾಲುಗಳು ನಿಲ್ಲುತ್ತವೆ. ತೇಲ್ತುಂಬ್ಡೆಯವರ ಪುಸ್ತಕವನ್ನು ಈ ಹಿನ್ನೆಲೆಯಲ್ಲೂ ನಾವು ಓದಬೇಕು.

ಅಂಬೇಡ್ಕರ್ ಸಂಕೀರ್ಣ ವ್ಯಕ್ತಿಯಾಗಿದ್ದರು. ಹೀಗಾಗಿಯೇ ಅವರ ದೃಷ್ಟಿಯಲ್ಲಿ ಯಾರೂ ಕಟು ವಿಮರ್ಶೆಯಿಂದ ಬಚಾವಾದವರಲ್ಲ. ಸಮಕಾಲೀನರಾದ ಮಹಾತ್ಮ ಗಾಂಧಿ, ತಿಲಕ್, ಸಾವರ್ಕರ್ ಮೊದಲಾಗಿ, ಪ್ರಾಚೀನ ವೇದೋಪನಿಷತ್ತುಗಳವರೆಗೆ ಅವರ ಟೀಕೆ ಟಿಪ್ಪಣಿಯ ವಿಸ್ತಾರವಿದೆ. ಮಹಾತ್ಮ ಗಾಂಧಿಯನ್ನು 'ಮಹಾತ್ಮ' ಎಂದು ಕರೆಯದೇ 'ಮಿಸ್ಟರ್ ಗಾಂಧಿ' ಎಂದು ಸಂಬೋಧಿಸುತ್ತಿದ್ದುದೇ ಅವರನ್ನು 'ಐಕಾನಾಕ್ಲಾಸ್ಟ್' ಎಂದು ಯಾರಾದರೂ ಕರೆಯಲು ಮುಖ್ಯ ಕಾರಣವಾಗಬಹುದು. ಎಷ್ಟೇ ದೊಡ್ಡವರಾದರೂ ಅಂಬೇಡ್ಕರ್ ಅವರ ಕಟು ಟೀಕಾಪ್ರಹಾರದಿಂದ ತಪ್ಪಿಸಿಕೊಂಡವರಿಲ್ಲ. ತೇಲ್ತುಂಬ್ಡೆ ತಮ್ಮ ಪುಸ್ತಕದಲ್ಲಿ ಅಂಬೇಡ್ಕರ್ ಅವರ ಭಿನ್ನ ವಿಚಾರಗಳನ್ನು ಪ್ರಖರವಾಗಿ ವ್ಯಕ್ತಪಡಿಸುವುದಲ್ಲದೇ, ಅಂಬೇಡ್ಕರ್ ಅವರನ್ನೇ ನಿಕಷಕ್ಕೆ ಒಡ್ಡುತ್ತಾರೆ. ಅವರ ವಿಚಾರಗಳಲ್ಲಿ ಇದ್ದಿರಬಹುದಾದ ವಿರೋಧಾಭಾಸಗಳನ್ನೂ ಚರ್ಚಿಸುತ್ತಾರೆ. ಒಂದು ರೀತಿಯಿಂದ ಅಂಬೇಡ್ಕರ್ ಮೂರ್ತಿ ಭಂಜಕರಾಗಿದ್ದರೆ, ತೇಲ್ತುಂಬ್ಡೆ ಅವರನ್ನು ಸಾಮಾನ್ಯ ಮಾನವನಾಗಿ ತುಲನಾತ್ಮಕವಾಗಿ ನೋಡಿ ತಾವೂ ಅಂಬೇಡ್ಕರ್ ಮೂರ್ತಿಯ ಭಂಜಕರಾಗುತ್ತಾರೆ. ತೇಲ್ತುಂಬ್ಡೆ ತಾವೇ ಹಿಂದುಳಿದ ವರ್ಗದವರಾದ್ದರಿಂದ, ಅಂಬೇಡ್ಕರ್ ಅವರ ಮೊಮ್ಮಗಳನ್ನು ಮದುವೆಯಾಗಿರುವುದರಿಂದ, ಹಾಗೂ ಈ ವಿಚಾರಗಳಲ್ಲಿ ಹೆಚ್ಚಿನ ಪಾಂಡಿತ್ಯ ಪಡೆದು ಹೆಸರುವಾಸಿಯಾಗಿರುವುದರಿಂದ, ಈ ಪುಸ್ತಕ ಒಟ್ಟಾರೆ ವಸ್ತುನಿಷ್ಠವಾಗಿ, ಹೆಚ್ಚಾಗಿ ಅಂಬೇಡ್ಕರ್ ಅವರನ್ನು ಮೆಚ್ಚಿ ಬರೆದಿರುವುದರಿಂದ ಅಲ್ಲಲ್ಲಿ ಕಟುವಾದ ಟೀಕೆಯನ್ನು ಮಾಡಿಯೂ ಬಚಾವಾಗಬಹುದು. ಇಲ್ಲವಾದರೆ ಈಗಿನ ದಿನಗಳಲ್ಲಿ ಅತ್ಯಲ್ಪ ಟೀಕೆಯೂ




ಕಷ್ಟದ ಮಾತೇ ಆಗಿದೆ. ಉದಾಹರಣೆಗೆ, 1997ರಲ್ಲಿ ಪ್ರಕಟಗೊಂಡ ಅರುಣ್ ಶೌರಿಯವರ 'ವರ್ಷಿಪಿಂಗ್ ಫಾಲ್ಸ್ ಗಾಡ್ಸ್' ಎನ್ನುವ ಪುಸ್ತಕ ಆಗಿನ ದಿನಗಳಲ್ಲಿ ಮತ್ತು ಈಗಲೂ ಎದುರಿಸುತ್ತಿರುವ ಟೀಕಾಪ್ರಹಾರ ಅಕಲ್ಪನೀಯವಾದದ್ದು. ಶೌರಿಯವರ ಪುಸ್ತಕದಲ್ಲಿಯೂ ದಾಖಲೆಗಳಲ್ಲಿರುವ ಮಾಹಿತಿಯನ್ನೇ ಪ್ರಸ್ತುತಪಡಿಸಿದ್ದರೂ, ಅವರ ಒಟ್ಟಾರೆ ಧಾಟಿ ಮತ್ತು ಧ್ವನಿ ಕುಹಕದಿಂದ ಕೂಡಿದೆಯಾದ್ದರಿಂದ ಅವರ ವಾದಸರಣಿಯೊಂದಿಗೆ ತೊಡಗಿಕೊಳ್ಳುವುದು ಕಷ್ಟವಾಗುತ್ತದೆ. ಯಾವಾಗ ಯಾರ ಭಾವನೆಗಳಿಗೆ ಪೆಟ್ಟಾಗುತ್ತದೋ ತಿಳಿಯದ ಒಂದು ಸಮಾಜವಾಗಿ ನಾವು ಬೆಳೆದು ಬಂದಿದ್ದೇವೆ.

ಒಂದು ದೃಷ್ಟಿಯಿಂದ ಕಂಡಾಗ ಅಂಬೇಡ್ಕರ್ ಅವರ ಜೀವನ ಅಸಂಖ್ಯ ಸಾಧನೆಗಳಿಂದ ಕೂಡಿದ್ದರೂ, ಅನೇಕ ಕಾರ್ಪಣ್ಯಗಳಿಂದ ತುಂಬಿತ್ತು. ಅರ್ಥಶಾಸ್ತ್ರದಲ್ಲಿ ಉನ್ನತ ವ್ಯಾಸಂಗ ಮತ್ತು ಪರಿಣತಿಯಿದ್ದರೂ, ಅದಕ್ಕೆ ತಕ್ಕ ನೌಕರಿ ಸಿಗಲಿಲ್ಲ. ಕಾನೂನಿನ ವಿಷಯದಲ್ಲಿ